


ಎಡದಿಂದ ಬಲಕ್ಕೆ

1. ಯುದ್ಧ ಪದ್ಧತಿಗಳನ್ನು ಚೆನ್ನಾಗಿ ಬಲ್ಲವನೇ ಸೇನಾ ಮುಖ್ಯಸ್ಥನಾದ 4
3. ಮಾವಿನ ಮರವನ್ನು ಏರುವ ಕೆಲಸಕ್ಕೆ ಈಗ ಬಿಡುವು 3
4. ಗೋಧಿ ಮೂಟೆಗಳನ್ನು ಶೇಖರಿಸಿಡುವ ಭಾರೀ ಮಳಿಗೆ 3
6. ಅನ್ನದಾತರ ಬಗೆಗೆ ಉಪೇಕ್ಷೆ ತೋರಿದರೇ? 4
8. ಅಂದು ಆಕಾಶದಲ್ಲಿ ಕಂಡ ದೃಶ್ಯ ಮನಸೆಳೆಯುವಂತಿತ್ತು 4
10. ಶಾಂತ ಮನಸ್ಕನ ಜೀವಿತ ನೂರು ವರ್ಷ ಮುಟ್ಟಿದೆ 4
12. ಬದಲಾಯಿಸುವುದು ಸಾಧ್ಯವೇ ಇಲ್ಲವೆಂದು ಜೋರುಮಾಡಿ ದಬ್ಬು 4
16. ನಮ್ಮ ನಿಮ್ಮೆಲ್ಲರ ಮನವೂ ಆಗಿರಲಿ ಕೊಳೆರಹಿತ 3
17. ಹಳ್ಳದಿಂದ ಹೊರತೆಗೆದ ಎಲ್ಲ ವಸ್ತುಗಳ ಬಣ್ಣವೂ ಅರಿಸಿನ 3
18. ಕಾಳು ಬೆಳೆದವರಿಗೆ ಕೊಳ್ಳುವವರ ಬಗೆಗೇ ಆತಂಕ 4

ಮೇಲಿನಿಂದ ಕೆಳಕ್ಕೆ

1. ಮುಂದಿನ ಆಲೋಚನೆಗಳನ್ನೆಲ್ಲ ತಳ್ಳಿ ಹಾಕುವುದೇ? 3
2. ತಗಡಿನಂತಿದೆ; ಆದರೆ ಅದು ಮರದ ತೊಗಟೆ, ಅಷ್ಟೆ 3
3. ಔಷಧೀಯ ಸಸ್ಯಗಳ ವಿನಾಶ ಕಂಡು ಬೇಸರ, ದುಃಖ 3
5. ಮೇಲಿಂದ ಧುಮುಕಲು ಸಿದ್ಧನಾಗಿದ್ದಾನೆ ನೋಡಿ ವೃದ್ಧ! 3
6. ಅನ್ಯಾಯದ ಉದ್ದೇಶಗಳನ್ನೇ ಹೊಂದಿದೆ, ನಮ್ಮದಲ್ಲದ ರಾಷ್ಟ್ರ 4
7. ಸ್ವಾರಸ್ಯವನ್ನು ತಿಳಿಸಿದವರಿಗೆ ಬಹುಮಾನ ಈ ಬಾಳೆಬೆಲ್ಲ ಮಿಶ್ರಣ 4
8. ಆತನಿಂದ ಹೊರಡುತ್ತಿರುವುದು ಕಷ್ಟಕಾಲದ ಕೂಗು 4
9. ಕಾಳು ಕೊಡಿಸಲು ಬಳಸಿದ್ದು ಕದ್ದು ತಂದ ದುಡ್ಡು 4
11. ಮಂದ್ರ ಸ್ಥಾಯಿಯ ಧ್ವನಿಯೂ ಹಿಂದಿರುಗಿ ಕೇಳಿಸಿತೇ? 3
13. ಸಂಬಂಧ ಗಟ್ಟಿಯಾದೊಡನೆ ಹಂಚಿದ್ದು ಈ ಸಿಹಿ ತಯಾರಿ 3
14. ಬಳಿಕ ನಡೆದದ್ದನ್ನೆಲ್ಲ ವಿವರಿಸಿದವ ಒಬ್ಬ ಪುಟ್ಟ ಹುಡುಗ 3
15. ಹೊಸಬರಿಗೆ ವಿರುದ್ಧ ನಿಂತವರೇ ಅಲ್ಲಿ ತುಂಬ ಅಧಿಕ 3

## 31—03—2022 ಉತ್ತರಗಳು

ಎಡದಿಂದ ಬಲಕ್ಕೆ

1. ಅಂಧಕಾರ 3. ಪತಂಗ 4. ಜರ್ಜರ 6. ದಣಾಯಕ 7. ಮಕರ 9. ಕೆನೆತ 11. ಕಹಾನಿ 13. ತವರು 15. ಹಸುಗೂಸು 17. ಕಠಿಣ 18. ಮಾರ್ಜನ 19. ತೆಪ್ಪನಿರು

ಮೇಲಿನಿಂದ ಕೆಳಕ್ಕೆ

1. ಅಂಗದ 2. ರಜಕ 3. ಪದಕ 5. ರವಾನೆ 7. ಮಸ್ತಕ 8. ರಜನಿ 9. ಕೆರೆತ 10. ತಳಿರು 12. ಹಾರ್ದಿಕ 14. ವರ್ಧನ 15. ಹಣತೆ 16. ಸುಮಾರು

ಪ್ರಶ್ನಾಂಕಣ

# ಅಮೆಜೋನಿಯಾ ಆಗಲಿದೆಯೇ ಸವನ್ನಾ?

ಅಮೆಜೋನಿಯಾ: ಅದು ಧರೆಯ ಅತ್ಯಂತ ವಿಸ್ತಾರ, ಅತ್ಯಂತ ಉತ್ಕೃಷ್ಟ ವೃಷ್ಟಿವನ (ಚಿತ್ರ ನೋಡಿ). ದಕ್ಷಿಣ ಅಮೆರಿಕ ಭೂಖಂಡದ ಶೇಕಡಾ 40 ರಷ್ಟು ಪ್ರದೇಶವನ್ನು ಆವರಿಸಿ, ಒಂಬತ್ತು ರಾಷ್ಟ್ರಗಳಲ್ಲಿ ಹರಡಿರುವ ಈ ಮಳೆಕಾಡಿನ ವಿಸ್ತಾರ 6.5 ದಶಲಕ್ಷ ಚದರ ಕಿ.ಮೀ.! ಈಗ್ಗೆ ಐದೂವರೆ ಕೋಟಿ ವರ್ಷದಿಂದ ಅಸ್ತಿತ್ವದಲ್ಲಿರುವ ಅಮೆಜೋನಿಯಾ ವೃಷ್ಟಿವನದ ಜೀವಿ ದಟ್ಟಣೆ ಮತ್ತು ವೈವಿಧ್ಯ ಕಲ್ಪನಾತೀತ. ಧರೆಯ ಜೀವಿ ಸಾಮ್ರಾಜ್ಯದಲ್ಲಿರುವ ಒಟ್ಟೂ ಜೀವಿ ಪ್ರಭೇದಗಳ ಶೇಕಡಾ 50 ರಷ್ಟು (ಎಂದರೆ ಸಮೀಪ ಹತ್ತು ದಶಲಕ್ಷ ಸಸ್ಯ ಮತ್ತು ಪ್ರಾಣಿ ಪ್ರಭೇದಗಳು) ಈ ನಿಬಿಡಾರಣ್ಯದಲ್ಲೇ ನೆಲೆಗೊಂಡಿವೆ.

ಗರಿಷ್ಠ ಉದ್ದದ, ಗರಿಷ್ಠ ಪಾತ್ರದ, ಗರಿಷ್ಠ ಜಲಾನಯನ ಪ್ರದೇಶದ ಮತ್ತು ಗರಿಷ್ಠ ಪ್ರಮಾಣದ ಜಲ ಪ್ರವಾಹದ ಅದ್ವಿತೀಯ ನದಿ 'ಅಮೆಜಾನ್' ಮತ್ತು ಅದರ 1,100 ಉಪನದಿಗಳ ಕೃಪೆಯಲ್ಲಿ ಅರಳಿ ನಿಂತಿರುವ ಈ ಅನನ್ಯ ವೃಷ್ಟಿವನ ಭೂ ಪರಿಸರದ ಸ್ವಾಸ್ಥ್ಯದಲ್ಲಿ ನಿರ್ವಹಿಸುತ್ತಿರುವ ಪಾತ್ರಗಳೂ ಅದ್ವಿತೀಯ , ಅನನ್ಯ. ಉದಾಹರಣೆಗೆ ವಾಯುಮಂಡಲದ ಶೇಕಡ 20 ರಷ್ಟು ಆಮ್ಲಜನಕ ಈ ವೃಷ್ಟಿವನದಿಂದಲೇ ಪೂರೈಕೆಯಾಗುತ್ತಿದೆ. ಜೊತೆಜೊತೆಗೇ ಭೂ ವಾತಾವರಣಕ್ಕೆ ಸೇರ್ಪಡೆಯಾಗುತ್ತಿರುವ ಇಂಗಾಲದ ಡೈ ಆಕ್ಸೈಡ್‌ನ ಪ್ರಧಾನ ಭಾಗವನ್ನು ಇದೇ ಅಡವಿಯೇ ಹೀರಿಕೊಳ್ಳುತ್ತಿದೆ. ಹಾಗೆಯೇ ಅಮೆಜೋನಿಯಾ ಹೇರಳ ಬಗೆಗಳ ಆಹಾರ ಮತ್ತು ವಾಣಿಜ್ಯ ಸಂಪನ್ಮೂಲಗಳ ಆಕರ ಕೂಡ. ಉದಾಹರಣೆಗೆ ಪ್ರಸ್ತುತ ಜಗದಾದ್ಯಂತ ಬಳಕೆಯಾಗುತ್ತಿರುವ ಸರ್ವ ವಿಧ ಔಷಧಗಳ ಶೇಕಡಾ 25 ಭಾಗ ಅಮೆಜೋನಿಯಾದ ಶೇಕಡ ಒಂದಕ್ಕಿಂತಲೂ ಕಡಿಮೆ ಸಂಖ್ಯೆಯ ಸಸ್ಯ ವಿಧಗಳಿಂದಲೇ ಒದಗುತ್ತಿದೆ!




ಆದರೆ, ವಿಪರ್ಯಾಸ ಏನೆಂದರೆ, ಕೃಷಿ ಭೂಮಿಗಾಗಿ, ಗೋಮಾಳಗಳಿಗಾಗಿ, ಹೆದ್ದಾರಿಗಳ ನಿರ್ಮಾಣಕ್ಕಾಗಿ, ನಗರಗಳ ವಿಸ್ತರಣೆಗಾಗಿ, ಕೈಗಾರಿಕೆಗಳ ಸ್ಥಾಪನೆಗಾಗಿ, ಬೆಲೆಬಾಳುವ ಮರಮಟ್ಟು ಗಳಿಗಾಗಿ, ಗಣಿಗಾರಿಕೆಗಾಗಿ... ಹೀಗೆ ನಾನಾ ಕಾರಣಗಳಿಗಾಗಿ ಅಮೆಜೋನಿಯಾದಲ್ಲಿ ಪ್ರತಿ ನಿಮಿಷದಲ್ಲೂ 150 ಎಕರೆ ಅಡವಿ ಬೆಂಕಿಗೆ ಆಹುತಿಯಾಗುತ್ತಿದೆ; ವರ್ಷಕ್ಕೆ ಏಳು ಶತಕೋಟಿ ವೃಕ್ಷಗಳು ಹನನಗೊಳ್ಳುತ್ತಿವೆ. ತತ್ಪರಿಣಾಮವಾಗಿ ಈ ಅನನ್ಯ, ಅಮೂಲ್ಯ ವೃಷ್ಟಿವನ ಕ್ಷಿಪ್ರವಾಗಿ ದುರ್ಬಲಗೊಳ್ಳುತ್ತಿದೆ. ಕಳೆದ ಕೆಲ ವರ್ಷಗಳಿಂದ ನಡೆದು ಬಂದ ಅಧ್ಯಯನದ ವರದಿಯೊಂದು ಸ್ಪಷ್ಟಪಡಿಸಿರುವಂತೆ ಕೋಟ್ಯಂತರ ವರ್ಷಗಳಿಂದ ದೃಢವಾಗಿದ್ದ ಅಮೆಜೋನಿಯಾದ ಪಾರಿಸರಿಕ ತಳಮಳಗಳನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ವೇಗವಾಗಿ ಕುಸಿಯುತ್ತಿದೆ. ಭೂ ತಾಪ ಹೆಚ್ಚಳ ಮತ್ತು ಇಂಥವೆಲ್ಲ ನಾನಾ ಮಾನವ ಮೂಲ ಹಾವಳಿಗಳನ್ನು ಎದುರಿಸಲಾಗದೆ ಅಮೆಜೋನಿಯಾದ ಸಮೀಪ 75 ರಷ್ಟು ಪ್ರದೇಶ 'ಸವನ್ನಾ' ಆಗಿ (ಅದೊಂದು ಬಗೆಯ ಹುಲ್ಲುಬಯಲು) ರೂಪಾಂತರಗೊಳ್ಳುವ ಹಾದಿ ಹಿಡಿದಿದೆ. ಎಂಥ ದುರಂತ!

■ ಎನ್. ವಾಸುದೇವ್